# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 369 ಪಿಜಿಸಿ 2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 11.11.2014

## ಅಧಿಸೂಚನೆ

ವಿಷಯ: ಹೊಸ ಶಾಲೆ ನೊಂದಣಿ ಸಂಬಂಧ ಆಡಳಿತ ಮಂಡಳಿಯು ಸಲ್ಲಿಸುವ ನೊಂದಣಿ ಶುಲ್ಕ ಪರಿಷ್ಕರಿಸುವ ಬಗ್ಗೆ.

******

ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 30 ಮತ್ತು 31 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಮತ್ತು ನೊಂದಣಿ) ನಿಯಮಗಳು, 1997 ಸೆಕ್ಷನ್ (3)ರರಡಿಯಲ್ಲಿ ಹೊರಡಿಸಲಾಗಿದ್ದ ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ 34 ವಿವಿಧ 2003 ದಿನಾಂಕ 26.05.2003 ಮತ್ತು ಇಡಿ 63 ಎಸ್‌ಇಎಸ್ 2004 ದಿನಾಂಕ 12.08.2005 ರಲ್ಲಿ ಹೊರಡಿಸಲಾಗಿದ್ದ ಆದೇಶದಲ್ಲಿನ ಹೊಸ ಶಾಲೆ ನೊಂದಣಿ ಸಂಬಂಧ ಆಡಳಿತ ಮಂಡಳಿಯು ಸಲ್ಲಿಸುವ ನೊಂದಣಿ ಶುಲ್ಕ, ಅರ್ಹ ನೊಂದಾಯಿತ ಆಡಳಿತ ಮಂಡಳಿಗಳು ವಿವಿಧ ಹಂತಗಳಲ್ಲಿ ಇಲಾಖೆ ಪ್ರಸ್ತಾವನೆಗಳು ಸಲ್ಲಿಸುವ ದಿನಾಂಕವನ್ನು ಹಾಗೂ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ 2009ರ ಸೆಕ್ಷನ್ 19 & 25ರಲ್ಲಿ ಶಾಲಾ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳನ್ನು ನಿಗಧಿಪಡಿಸಬೇಕಾಗಿದೆ.

ಈ ಕೆಳಕಂಡ ಪರಿಷ್ಕೃತಗೊಳಿಸಿದ ಅಂಶಗಳಂತೆ ಹೊಸದಾಗಿ ಖಾಸಗಿ ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢಶಾಲೆ ತೆರೆಯುವ ಸಂಬಂಧ ಕ್ರಮವಹಿಸಲು ಸೂಚಿಸಿದೆ.

ಹೊಸ ಶಾಲಾ ನೊಂದಣಿ ಶುಲ್ಕ:

| ಕ್ರಸಂ | ಪ್ರಸ್ತುತ ನೊಂದಣಿ ಶುಲ್ಕ | ಪರಿಷ್ಕೃತ ನೊಂದಣಿ ಶುಲ್ಕ | ಸಂಸ್ಕರಣ ಶುಲ್ಕ |
|---|---|---|---|
| 1 | ಪೂರ್ವ ಪ್ರಾಥಮಿಕ ಶಾಲೆ : ರೂ. 2000 | ರೂ. 25,000 | ರೂ. 10,000 |
| 2 | 1-5ನೇ ತರಗತಿಕನ್ನಡ ಮಾಧ್ಯಮ : ರೂ. 5000 | ರೂ. 25,000 | ರೂ. 10,000 |
| 3 | 6-8ನೇ ತರಗತಿಕನ್ನಡ ಮಾಧ್ಯಮ : ರೂ. 5000 | ರೂ. 50,000 | ರೂ. 20,000 |
| 4 | 6-8ನೇ ತರಗತಿ (ಆಂಗ್ಲ ಮಾಧ್ಯಮ) : ರೂ. 10,000 | ರೂ. 1,00,000 | ರೂ. 20,000 |
| 5 | 9-10ನೇ ತರಗತಿ ( ಆಂಗ್ಲ&ಕನ್ನಡ ಮಾಧ್ಯಮ) : ರೂ. 10,000 | ರೂ. 50,000 (ಕನ್ನಡ)<br>ರೂ. 1,00,000 (ಆಂಗ್ಲ) | ರೂ. 20,000 |

ಅರ್ಹ ನೊಂದಾಯಿತ ಆಡಳಿತ ಮಂಡಳಿಗಳು ವಿವಿಧ ಹಂತಗಳಲ್ಲಿ ಇಲಾಖೆ ಪ್ರಸ್ತಾವನೆಗಳು ಸಲ್ಲಿಸುವ ದಿನಾಂಕ: **ಪ್ರತಿ ವರ್ಷದ 31 ಅಕ್ಟೋಬರ್ ಆಗಿರುತ್ತದೆ. ಆದರೆ, 2015-16ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಹೊಸದಾಗಿ ಪ್ರಾರಂಭಿಸುವ ಖಾಸಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆ ನೊಂದಣಿ ಮಾಡಲು 31 ಅಕ್ಟೋಬರ್ 2014ವರೆಗೆ ಇರುವ ಗಡುವನ್ನು 30 ನವೆಂಬರ್ 2014 ವರೆಗೆ ವಿಸ್ತರಿಸಲಾಗಿದೆ**

ಶಾಲಾ ಶೈಕ್ಷಣಿಕ ವಾತಾವರಣ ಅತ್ಯುತ್ತಮವಾಗಿ ಕಲ್ಪಿಸಬೇಕಾದ ಮೂಲಭೂತ ಸೌಕರ್ಯಗಳು: